ಚಿಲ್ಕಾಕ್ಕೆ ಬಂದ ಕೆಲಸ ಮುಗಿಯುತ್ತದೆ. ಹತ್ತು ವರ್ಷಗಳ ಹಿಂದೆ ಚಿಲ್ಕಾ ಸರೋವರಕ್ಕೆ ಅವರಿಬ್ಬರೂ ವಿಹಾರಕ್ಕೆ ಬಂದಾಗ ಸರೋವರದ ನಡುವೆ ದೋಣಿಯಲ್ಲಿ ಹೃದಯಾಘಾತದಿಂದ ಮರಣಿಸಿದ್ದ ಪತಿಯ ನೆನಪಿಗಾಗಿ ಆಕೆ ಪ್ರತಿ ವರ್ಷ ಜನವರಿ ಎಂಟನೇ ತಾರೀಖಿನಂದು ಈ ಪ್ರವಾಸ ಮಾಡುತ್ತಾಳೆ.

ಬೆಳಿಗ್ಗೆ ಹನ್ನೊಂದು ಗಂಟೆಗೆ ಸರೋವರದ ದಡದಲ್ಲಿ ದೋಣಿಗಾಗಿ ಕಾಯುತ್ತ ನಿಂತಿದ್ದಳು. ಚಿಲ್ಕಾ ಏಷ್ಯಾದಲ್ಲೇ ಅತಿ ದೊಡ್ಡ ಸಿಹಿ ನೀರಿನ ಸರೋವರ. ಸುಮಾರು 1165 ಚದರ ಕಿಲೋಮೀಟರ್ ವಿಸ್ತೀರ್ಣ. ನೂರಾರು ನೀರಹಕ್ಕಿಗಳಿಗೆ ತಾಣ. ಆಕೆಗಾಗಿ ಏರ್ಪಾಡು ಮಾಡಿದ ದೋಣಿ ಬಂತು. ಗೈಡ್ ಜೊತೆಯಲ್ಲಿ ದೋಣಿ ಏರಿದಳು. ಸರೋವರ ಮಂದ್ರವಾಗಿತ್ತು. ಗುಂಪು ಗುಂಪಾಗಿ ನೀರಹಕ್ಕಿಗಳು ನೀರನ್ನು ಮುತ್ತಿಡುತ್ತಾ ಅದ್ಭುತ ವಿನ್ಯಾಸಗಳನ್ನು ಮಾಡುತ್ತಿದ್ದವು. ದೂರದಿಂದ ಮೆಲುದನಿಯಲ್ಲಿ ಹಾಡೊಂದು ಕೇಳಿಸುತ್ತಿತ್ತು.

ಆಕೆಯ ಪಕ್ಕದಲ್ಲಿ ನಿಂತ ಗೈಡ್ ಬೋರು ಹೊಡೆಸುತ್ತಿದ್ದ. ಆಕೆ ಗೈಡ್ ಬಗ್ಗೆ ತಲೆಕೆಡಿಸಿಕೊಳ್ಳದೆ ಕ್ಯಾಮರದಲ್ಲಿ ಸರೋವರದ ಮನೋಹರವಾದ ದೃಶ್ಯಗಳನ್ನು ಕ್ಲಿಕ್ಕಿಸುತ್ತಿದ್ದಳು. ಆ ದೃಶ್ಯಗಳೆಲ್ಲವೂ ಆಕೆಯನ್ನು ಒಂದು ಮನೋಜ್ಞವಾದ ನೆನಪಿನೊಳಕ್ಕೆ ಕರೆದೊಯ್ಯುತ್ತವೆ. ದೀಪೋತ್ಸವದಂತಿದ್ದ ಒಂದು ರಾತ್ರಿ ಆಕೆ ರೇಷ್ಮೆ ಸೀರೆಯಲ್ಲಿ ಝುಗಝುಗಿಸುತ್ತಾ ಚಿಲ್ಕಾ ದಡದಲ್ಲಿ ಗಂಡನ ಪಕ್ಕದಲ್ಲಿ ಕೂತ ಕ್ಷಣಗಳು ನೆನಪಿಗೆ ಬಂದವು. ಅವನ ಮಡಿಲಲ್ಲಿ ಮಲಗಿ ಪ್ರೀತಿಯನ್ನು ಸವಿದ ಮಧುರದಿನ ನೆನಪಿಗೆ ಬಂತು. ಅಕೆಯ ಪತಿ ವಿಜಯನಗರಂ ಜಿಲ್ಲೆಗೆ ಸೇರಿದ ಬ್ರಾಹ್ಮಣ ಹುಡುಗ. ಆಕೆ ಹೈದರಾಬಾದ್ ಮೂಲದ ರೆಡ್ಡಿ ಹುಡುಗಿ. ಅವನಲ್ಲಿ ಒಂದಿಷ್ಟು ಸನಾತನದ ಮಡಿವಂತಿಕೆ. ಆಕೆಯಲ್ಲಿ ನಿರ್ಭಯವಾದ ನಿರಂಕುಶ ಪೊಗರು. ಅವನ ಕಣ್ಣುಗಳು ಹೆದರಿಕೆಯಿಂದ ಮಿಣುಕುವ ಲಾಟೀನು ದೀಪಗಳು, ಆಕೆಯ ಕಣ್ಣುಗಳು ವಿವಶತೆಯಿಂದ ಧಗಧಗಿಸುವ ಬೆಳದಿಂಗಳು. ಆಕೆಯ ಗಂಡನಿಗೆ ಚಿಲ್ಕಾ ಸರೋವರವೆಂದರೆ ವಿಶೇಷವಾದ ಪ್ರೀತಿ. ತಮ್ಮ ಹನಿಮೂನ್ ಇಲ್ಲಿಯೇ ನಡೆಯಬೇಕೆಂದು ಅವನ ಬಯಕೆ. ಮೊದಲ ನೋಟದಿಂದಲೇ ಚಿಲ್ಕಾ ಎಂದರೆ ಇಷ್ಟವಾಯಿತು ಆಕೆಗೆ.

ನಿದ್ರಿಸುತ್ತಿರುವ ನೀರಿನ ಮೇಲೆ ಕನಸಿನ ಗಾಯದಂತೆ ದೋಣಿ ಚಲಿಸುತ್ತಿತ್ತು. ಆಕೆಗರಿವಿಲ್ಲದಂತೆಯೇ ಆ ದೃಶ್ಯದ ಸುಂದರತೆಯಲ್ಲಿ ಮುಳುಗಿ ಹೋದಳು. ದಿಢೀರನೇ ಸರೋವರದ ಮೇಲೆ ಕಪ್ಪನೆಯ ನೆರಳು ಸುಳಿಯಿತು. ಸರೋವರ ಕಪ್ಪು ಮುದ್ದೆಯಂತೆ ಬದಲಾಯಿತು. ಆಗಸದಲ್ಲಿ ಕಾರ್ಮೋಡಗಳು ಕವಿದವು. ಅಲೆಗಳ ಶಬ್ದ ಜೋರಾಗತೊಡಗಿತು. ಆಕೆಯ ಮೂಡ್‌ನಲ್ಲಿ ಬದಲಾವಣೆ ಉಂಟಾಯಿತು. ಇಂತಹ ದೋಣಿ ಪ್ರಯಾಣದಲ್ಲೇ ಆಕೆಯ ಗಂಡ ಹೃದಯಾಘಾತದಿಂದ ಸತ್ತು ಹೋಗಿದ್ದು. ಅವರಿಬ್ಬರೂ ಆಗ ಸರೋವರದ ನಡುವೆ ಇದ್ದರು. ಹಿಂದಕ್ಕೆ ಮರಳಿ ವೈದ್ಯರ ಬಳಿ ಹೋಗುವಷ್ಟರಲ್ಲಿ ಅವನು ಸತ್ತು ಹೋಗಿದ್ದ. ಎದೆನೋವು ಬರುವ ಕೆಲವು ನಿಮಿಷಗಳ ಮುಂಚೆ ಅವರಿಬ್ಬರೂ ಜೋರಾಗಿ ಜಗಳ ಮಾಡಿದ್ದರು.

'ನನ್ನನ್ನು ಹಿಂದಕ್ಕೆ ಕರೆದೊಯ್ಯಿ' ಆಕೆ ಚೀರಿದ್ದಳು.

'ಈಗ ಸರೋವರದೊಳಕ್ಕೆ ಮೂವತ್ತು ಕಿಲೋಮೀಟರ್ ಬಂದಿದ್ದೇವೆ.'

'ನಾನು ಹೋಗಬೇಕು'

'ತಾರಾ! ನನ್ನ ಮಾತು ಕೇಳು'

'ನಾನು ದಣಿದಿದ್ದೇನೆ. ಬೇಸರದಿಂದ ಸತ್ತು ಹೋಗಿದ್ದೇನೆ. ಹೆಣದಂತೆ ಸರೋವರದ ಮೇಲೆ ತೇಲಾಡಲಾರೆ.'

'ನೀನು ಹೋಗಲು ಸಾಧ್ಯವಿಲ್ಲ'

'ಈ ನೀರಿನಲ್ಲಿ ಜೀವವಿಲ್ಲ. ಉತ್ಸಾಹವಿಲ್ಲ, ನಾನು ಹೋಗಬೇಕು'

'ನಥಿಂಗ್ ಡೂಯಿಂಗ್'

'ಗೋ ಟು ಹೆಲ್ ಅಂಡ್ ಐ ಹೇಟ್ ಯೂ'

ದೋಣಿ 'ನಲಬನ'ವರೆಗೂ ಹೋಗಿತ್ತು. ಅಷ್ಟೊತ್ತು ಜಗಳವಾಡುತ್ತಲೆ ಇದ್ದರು. ಫ್ಲೆಮಿಂಗೋ ಹಕ್ಕಿಗಳೆಲ್ಲಾ ಒಮ್ಮೆಲೇ ದೋಣಿಯನ್ನು ಸುತ್ತುವರಿಯುತ್ತಿರುವ ಸಮಯದಲ್ಲಿ ಅವನಿಗೆ ಎದೆನೋವು ಬಂತು. ದೋಣಿಯನ್ನು ವಾಪಸ್ ತಿರುಗಿಸಿದರು. ಹಿಂತಿರುಗಲು ಮೂರು ತಾಸು ಪ್ರಯಾಣ. ಅಷ್ಟರೊಳಗೆ ಅವನು ಸತ್ತು ಹೋದ. ಅವನು ನೋವಿನಿಂದ ಒದ್ದಾಡಿದ ದೃಶ್ಯಗಳು ಆಕೆಗಿನ್ನೂ ಕಣ್ಣೆದುರಿಗೆ ನಡೆದಂತೆ ನೆನಪಿಗೆ ಬಂದವು. ಗಾಯವನ್ನು ಕೆದಕಿ ಆ ನೋವನ್ನು ಪದೇ ಪದೇ ನೆನಪಿಗೆ